**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 4187/2021**

ಸಿ.ಡಬ್ಲ್ಯೂ -03
ಪಿ.ಡಬ್ಲ್ಯೂ-03

ಸಾಕ್ಷಿದಾರನ ಹೆಸರು :- ಲೋಕೇಶ್
ತಂದೆಯ ಹೆಸರು :- ಲಂಕಪ್ಪ
ವಯಸ್ಸು :- 55 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ಲಂಕಪ್ಪನಪಾಳ್ಯ

**ಸಾಕ್ಷಿಗೆ ದಿಃ 30.06.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ದಿಃ 17.02.2021 ರಂದು ಮದ್ಯಾಹ್ನ 12.30 ರಿಂದ 1 ಗಂಟೆಯ ಸಮಯದಲ್ಲಿ ಬ್ಯಾಡರಹಳ್ಳಿಯಲ್ಲಿರುವ ಚಾಸಾ 2 ಅವರ ಮನೆಯ ಹತ್ತಿರ ಅವರನ್ನು ನೋಡಲು ಹೋಗಿದ್ದು ಅವರು ಮನೆಯಲ್ಲಿ ಇರುವುದಿಲ್ಲವೆಂದು ನನ್ನ ಸೊಸೆ ಹೇಳಿರುತ್ತಾರೆ. ಹೊಲದ ಬಳಿ ಹೋಗಿದ್ದಾರೆಂದು ಹೇಳಿದ್ದು ಮದ್ಯಾಹ್ನ 2 ರಿಂದ 2.30 ಗಂಟೆಯ ಸಮಯದಲ್ಲಿ ಹೆಬ್ಬೆವಿನಮರ ಮಾರಾಟದ ವಿಚಾರದಲ್ಲಿ ಜಗಳವಾಗಿದ್ದು ಆರೋಪಿ ದೊಣ್ಣೆಯಿಂದ ಅವರಿಗೆ ಬೈದು ಸೊಂಟ, ಕಾಲು ಮತ್ತು ಬೆನ್ನಿಗೆ ಹೊಡೆದಿರುತ್ತಾರೆ. ಅವ್ಯಾಚ್ಚ ಶಬ್ದಗಳಿಂದ ಬೈದಿರುತ್ತಾರೆ. ಚಾಸಾ 3 ಅವರನ್ನು ಅಂಬ್ಯುಲೇನ್ಸ ಗೆ ಕರೆ ಮಾಡಿ ಕುಣಿಗಲ್ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ.

ಇವತ್ತು ನಿನ್ನನ್ನು ಬಿಟ್ಟಿದಿನಿ ಇನ್ನೊಂದು ಸಲ ನಿನ್ನನ್ನು ನೋಡಿಕೊಳ್ಳುತ್ತೇನೆಂದು ಹೇಳಿರುತ್ತಾರೆ. ನಂತರ ಕುಣಿಗಲ್ ಸರ್ಕಾರಿ ಆಸ್ಪತ್ರೆಯಿಂದ ಎಸಿಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆರೋಪಿಯನ್ನು ಮತ್ತು ದೊಣ್ಣೆಯನ್ನು ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**<u>ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.</u>**

ಆರೋಪಿ ಚಾಸಾ 2 ಅವರ ತಲೆ ಜುಟ್ಟನ್ನು ಎಳೆದಾಡಿ ಅವರು ಉಟ್ಟುಕೊಂಡಿದ್ದು ಸೀರೆಯನ್ನು ಹಿಡಿದು ಎಳೆದು ಹರಿದು ಹಾಕಿ ಅವಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 1 ಅವರು ಜಗಳ ಬಿಡಿಸಲು ಬಂದಾಗ ಆರೋಪಿ ಅವರಿಗೂ ಸಹ ಬೋಳಿ ಮಗನೆ ಸೂಳೆ ಮಗನೆ ಎಂದು ಬೈದು ಕೈಯಿಂದ ಮುಖಕ್ಕೆ ಮತ್ತು ಮೈಕೈಗೆ ಗುದ್ದಿ ನೋವುಂಟು ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಮತ್ತು ಚಾಸಾ 4 ಜಗಳ ಬಿಡಿಸಿರುತ್ತೇವೆ ಎಂದರೆ ಸರಿ. ಆರೋಪಿ ದೊಣ್ಣೆಯನ್ನು ಅಲ್ಲಿಯೇ ಬಿಸಾಡಿ ಇವತ್ತು ಉಳಿದುಕೊಂಡಿದಿಯಾ ನಾಳೆ ನಿನ್ನನ್ನು ಕೊಲೆ ಮಾಡಿ ಹುತು ಹಾಕುತ್ತೇನೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆ ದಿನ ಚಾಸಾ 2 ಅವರ ಧರಿಸಿದ್ದ ಸೀರೆಯನ್ನು ನಾನು ಗುರುತಿಸುತ್ತೇನೆ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕೋರಿಗೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**